MAY 17, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **'ಒಂದು ರಾಷ್ಟ್ರ; ಒಂದು ಚುನಾವಣೆ'; ಸಂಸದ ಪಿ.ಪಿ. ಚೌಧರಿ ಅಧ್ಯಕ್ಷತೆಯ, ಜಂಟಿ ಸಂಸದೀಯ ಸಮಿತಿ, ಬೆಂಗಳೂರಿಗೆ ಭೇಟಿ.**
- **ವಿಶೇಷಚೇತನ ಮಕ್ಕಳಿಗಾಗಿ, ಉಡುಪಿಯಲ್ಲಿ, ರಾಜ್ಯದಲ್ಲೇ ಪ್ರಥಮ, ಸಾಮರ್ಥ್ಯ ವನ.**
- **ಹತ್ತಕ್ಕಿಂತ ಹೆಚ್ಚು, ಮಹಿಳೆಯರಿರುವ ಕಚೇರಿಗಳಲ್ಲಿ, '*ಶಿ ಬಾಕ್ಸ್*' ಅಳವಡಿಸಲು, ಧಾರವಾಡ ಜಿಲ್ಲಾಡಳಿತದಿಂದ ಕ್ರಮ.**
- **ಹಂಪಿಯಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಉತ್ಖನನ; ಎರಡು ಪ್ರಮುಖ ಐತಿಹಾಸಿಕ ಕುರುಹುಗಳು, ಪತ್ತೆ.**

<><><>

**ಈಗ ವಾರ್ತೆಗಳ ವಿವರ**

<><><>

**ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆಯನ್ನು, ಏಕಕಾಲಕ್ಕೆ ನಡೆಸುವ ಉದ್ದೇಶದಿಂದ, 'ಒಂದು ರಾಷ್ಟ್ರ; ಒಂದು ಚುನಾವಣೆ' ಧ್ಯೇಯದೊಂದಿಗೆ, ಸಂವಿಧಾನದ, 129ನೇ ತಿದ್ದುಪಡಿ, ಪ್ರಸ್ತಾವಿತ ವಿಧೇಯಕ 2024, ಮತ್ತು ಕೇಂದ್ರಾಡಳಿತ ಪ್ರದೇಶಗಳ, ಕಾನೂನುಗಳ ತಿದ್ದುಪಡಿ ವಿಧೇಯಕ 2024, ದೇಶದ ಪ್ರಜಾಪ್ರಭುತ್ವ ಮತ್ತು ಚುನಾವಣಾ ಚೌಕಟ್ಟಿನ ಕಾರ್ಯನಿರ್ವಹಣೆಯ ಮೇಲೆ, ಬೀರುವ ವ್ಯಾಪಕ ಪರಿಣಾಮಗಳನ್ನು ಅಭ್ಯಸಿಸಲು, ಸಂಸದ ಪಿ.ಪಿ. ಚೌಧರಿ ಅಧ್ಯಕ್ಷತೆಯ, ಜಂಟಿ ಸಂಸದೀಯ ಸಮಿತಿ, ಬೆಂಗಳೂರಿಗೆ ಭೇಟಿ ನೀಡಿದೆ. ಬೆಂಗಳೂರು ಮತ್ತು ಗುಜರಾತಿನ ಗಾಂಧಿನಗರಕ್ಕೆ, ಈ ತಿಂಗಳ 21ರ ವರೆಗೆ ಅಧ್ಯಯನ ಪ್ರವಾಸ ಕೈಗೊಂಡಿರುವ, ಜಂಟಿ ಸಂಸದೀಯ ಸಮಿತಿ ಸದಸ್ಯರು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಮಾಜಿ ಮುಖ್ಯಮಂತ್ರಿ ಡಾಕ್ಟರ್ ಎಂ. ವೀರಪ್ಪ ಮೊಯ್ಲಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಸಂಸದರು, ಬಿ.ಎಸ್.ಪಿ., ಆಪ್ ಸೇರಿದಂತೆ, ಅನೇಕ ಪಕ್ಷಗಳ ಪ್ರತಿನಿಧಿಗಳೊಂದಿಗೆ, ಸಮಾಲೋಚಿಸಿದರು.**

ಬಳಿಕ ಸುದ್ದಿಗೋಷ್ಠಿ ನಡೆಸಿದ, ಸಂಸದ ಪಿ.ಪಿ. ಚೌಧರಿ, ಮಸೂದೆ ಅಂಗೀಕಾರಗೊಳ್ಳಲು ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ. ಎಲ್ಲ ಪಕ್ಷಗಳ ಒಮ್ಮತ ಪಡೆಯಲು, ಸಮಿತಿ ಪ್ರಯತ್ನಿಸುತ್ತದೆ ಎಂದು, ಹೇಳಿದರು.

<><><>

ಸಂಸದ ಪಿ.ಪಿ. ಚೌಧರಿ ಧ್ವನಿ 60 ಸೆಕೆಂದುಗಳು

<><><>

ವಿಶೇಷಚೇತನ ಮಕ್ಕಳಿಗಾಗಿ, ಉಡುಪಿಯಲ್ಲಿ, ರಾಜ್ಯದಲ್ಲೇ ಪ್ರಥಮ, ಸಾಮರ್ಥ್ಯ ವನ ರೂಪಿಸಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವರಾದ, ಲಕ್ಷ್ಮೀ ಹೆಬ್ಬಾಳ್ಕರ, ಉಡುಪಿಯಲ್ಲಿ ತಿಳಿಸಿದ್ದಾರೆ. 4 ಕೋಟಿ 90 ಲಕ್ಷ ರೂಪಾಯಿ ವೆಚ್ಚದಲ್ಲಿ, ವಿಶೇಷಚೇತನರಿಗೆ ಸಮಗ್ರ ಪುನರ್ವಸತಿ, ಚಿಕಿತ್ಸಾ ಸೇವೆಗಳು, ಉದ್ಯೋಗಾವಕಾಶ ಮತ್ತು ಸ್ವತಂತ್ರ, ಸ್ವಾವಲಂಬಿ ಜೀವನಕ್ಕೆ, ಸಾಮರ್ಥ್ಯ ವೃದ್ಧಿಸುವ ನಿಟ್ಟಿನಲ್ಲಿ, ವಿಶಿಷ್ಟ ಪಾರ್ಕ್ ನಿರ್ಮಾಣವಾಗಲಿದೆ ಎಂದರು. ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಅಧ್ಯಕ್ಷತೆಯಲ್ಲಿ, ಪ್ರತ್ಯೇಕ ಸಾಮರ್ಥ್ಯ ಟ್ರಸ್ಟ್ ರಚಿಸಲಾಗಿದೆ. ಒಂದೂವರೆ ಕೋಟಿ ರೂಪಾಯಿ, ರಾಜ್ಯ ಸರ್ಕಾರದ ಅನುದಾನ ನೀಡಲಾಗಿದೆ, ಎಂದು ಹೇಳಿದರು.

<><><>

ಸರ್ಕಾರಿ, ಖಾಸಗಿ ಕಚೇರಿಗಳು ಮತ್ತು ಕೈಗಾರಿಕೆಗಳಲ್ಲಿ, ಹತ್ತಕ್ಕಿಂತ ಹೆಚ್ಚು, ದುಡಿಯುವ ಮಹಿಳೆಯರಿದ್ದಲ್ಲಿ, ಕಡ್ಡಾಯವಾಗಿ ಮತ್ತು ತುರ್ತಾಗಿ, ಶಿ ಬಾಕ್ಸ್ (She Box) ಅಳವಡಿಸುವಂತೆ, ಧಾರವಾಡ ಜಿಲ್ಲಾಧಿಕಾರಿ ಆರ್. ಸ್ನೇಹಲ್ ಆದೇಶಿಸಿದ್ದಾರೆ. ಕೆಲಸದ ಸ್ಥಳದಲ್ಲಿ, ಮಹಿಳೆಯರ ಮೇಲಿನ, ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ-2013ನ್ನು, ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಕ್ರಮ ಕೈಗೊಂಡಿದ್ದಾಗಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ ಅವರು, ಪಾಷ್ (POSH) ಕಾಯ್ದೆ 2013ಕ್ಕೆ ಸಂಬಂಧಿಸಿ, ಸ್ಥಳೀಯ ದೂರು ಸಮಿತಿಯನ್ನು ರಚಿಸಲಾಗಿದೆ. 928 ಕಚೇರಿಗಳಲ್ಲಿ, ಶಿ ಬಾಕ್ಸ್ ಅಳವಡಿಸಲಾಗಿದೆ, ಎಂದರು.

<><><>

ಜಿಲ್ಲಾಧಿಕಾರಿ ಆರ್.ಸ್ನೇಹಲ್ ಧ್ವನಿ 55 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಿಶ್ವ ಪಾರಂಪರಿಕ ತಾಣ, ಹಂಪಿಯಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಕೈಗೊಂಡಿರುವ, ಉತ್ಖನನ ಕಾರ್ಯದಲ್ಲಿ, ಎರಡು ಪ್ರಮುಖ ಐತಿಹಾಸಿಕ ಕುರುಹುಗಳು ಪತ್ತೆಯಾಗಿವೆ. ಆನೆ ಲಾಯದ ಬಳಿ, ಜೈನ ಬಸದಿ ಸಂಕೀರ್ಣದ ಹತ್ತಿರ, ಶತಮಾನಗಳಷ್ಟು ಹಳೆಯ, ಭವ್ಯ ದೇವಾಲಯದ ಕಲ್ಲಿನ ಮೇಲ್ಛಾವಣಿ ಹಾಗೂ ಹಜಾರ ರಾಮನ ದೇವಾಲಯ

ದ್ವಾರದ ಬಳಿ, ಅತ್ಯಂತ ಸುಂದರ ಆನೆಯ ಕಲಾ ಕೃತಿ ಪತ್ತೆಯಾಗಿದೆ. ಪ್ರದೇಶ ಸಮಾಚಾರಕ್ಕಾಗಿ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿ ವಲಯದ ಪುರಾತತ್ವ ಸರ್ವೇಕ್ಷಣೆ ಸಹಾಯಕ ಅಧೀಕ್ಷಕ, ಡಾಕ್ಟರ್ ಜೆ. ರವಿಕುಮಾರ, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಜೆ. ರವಿಕುಮಾರ ಧ್ವನಿ 45 ಸೆಕೆಂದುಗಳು

<><><>

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ಕೋಲಾರ ಜಿಲ್ಲೆಯಲ್ಲಿ ಸಂಗ್ರಹಿಸಿದ್ದ, 6 ವಿವಿಧ ತರಕಾರಿ ಮಾದರಿಗಳ, ತಪಾಸಣಾ ವರದಿ ಪ್ರಕಟವಾಗಿದ್ದು, ಉತ್ತಮ ಗುಣಮಟ್ಟದಿಂದ ಕೂಡಿವೆ ಎಂದು, ದೃಢಪಟ್ಟಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಸಂಗ್ರಹಿಸಲಾದ, ಒಟ್ಟು 6 ತರಕಾರಿ ಮಾದರಿಗಳನ್ನು, ಬೆಂಗಳೂರಿನ ಸಾರ್ವಜನಿಕ ಪ್ರಯೋಗಾಲಯ, ಪ್ರಮಾಣಿಕರಿಸಿದೆ. ಕೋಲಾರ ತಾಲೂಕು, ನರಸಾಪುರದ ದೊಣ್ಣೆ ಮೆಣಸಿನಕಾಯಿ, ಮುಳಬಾಗಿಲು ತಾಲೂಕು ಬೈರಕೂರು ಹೋಬಳಿಯ, ನವಿಲುಕೋಸು, ಮುಳಬಾಗಿಲು ತಾಲೂಕು ನಂಗಲಿಯ ಹೀರೆಕಾಯಿ, ಶ್ರೀನಿವಾಸಪುರ ತಾಲೂಕಿನ, ಹಾಗಲಕಾಯಿ, ಮಾಲೂರಿನ ಬೀಟ್ರೂಟ್ ಹಾಗೂ ಎಚ್.ಕ್ರಾಸ್ ನ ದುಂಡು ಬದನೆಕಾಯಿಯನ್ನು, ಸಾರ್ವಜನಿಕರು ಬಳಸಬಹುದಾಗಿದೆ.

<><><>

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು, ಕೋಣಂದೂರು ಸಮೀಪ, ಹುಲ್ಲತ್ತಿ ರಸ್ತೆಯಲ್ಲಿ ಸಂಭವಿಸಿದ ಭೀಕರ ಲಾರಿ ಅಪಘಾತದಲ್ಲಿ, ಓರ್ವ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದು, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹರಿಹರ ಮೂಲದ, 35 ಜನ ಪ್ರಯಾಣಿಕರನ್ನು ಹೊತ್ತ ಲಾರಿ, ಹಣೆಗೆರೆ ಕಟ್ಟೆಯಿಂದ ಪಿರನ್‌ಗುಡ್ಡದ ಕಡೆಗೆ ತೆರಳುತ್ತಿದ್ದ ವೇಳೆ, ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ, ಮಗುಚಿತು ಎಂದು, ವರದಿ ತಿಳಿಸಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ, ಬೆಂಗಳೂರಿನಲ್ಲಿ ಇಂದು, ಶಹಾಜಿ ರಾಜೆ ಭೋಸ್ಲೆ ಮಹಾರಾಜರ ಜಯಂತ್ಯುತ್ಸವ ಆಯೋಜಿಸಿದೆ.

<><><>

"ಡಿಜಿಟಲ್ ಲೈಫ್‌ಲೈನ್‌ಗಳು; ಸಂಪರ್ಕಿತ ಜಗತ್ತಿನಲ್ಲಿ, ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು" ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿ ದಿನಾಚರಣೆ.

<><><>

ಇಂದು, ವಿಶ್ವ ಅಧಿಕ ರಕ್ತದೊತ್ತಡ ಜಾಗೃತಿ ದಿನವನ್ನು ಸಹ, ಆಚರಿಸಲಾಗುತ್ತಿದೆ.

<><><>

**ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ಡಾಕ್ಟರ್ ನಾಗಲಕ್ಷ್ಮೀ ಚೌಧರಿ, ಇಂದು ಬೆಳಗ್ಗೆ 9:20ಕ್ಕೆ, ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ.**

<><><>

**ಧಾರವಾಡ ಜಿಲ್ಲೆಯ, ಮತದಾರ ಯಾದಿಯ ವಿಶೇ ’ ಸಮಗ್ರ ಪರಿ ್ಕರಣೆ, ಮ್ಯಾಪಿಂಗ್ ಕಾರ್ಯ ಇಂದು ಮತ್ತು ನಾಳೆ, ಹಾಗೂ 23 ಮತ್ತು 24 ರಂದು, ವಿಶೇ ’ ಅಭಿಯಾನ ಜರುಗಲಿದೆ ಎಂದು, ಜಿಲ್ಲಾಧಿಕಾರಿ ಆರ್. ಸ್ನೇಹಲ್ ತಿಳಿಸಿದ್ದಾರೆ.**

<><><>

**ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಕದ್ರಿ ಉದ್ಯಾನದಲ್ಲಿ, ಗೇರು ಅಭಿವೃದ್ಧಿ ನಿಗಮ, ಇಂದು ಮತ್ತು ನಾಳೆ, ರಾಜ್ಯ ಮಟ್ಟದ ಗೇರು ಮೇಳ ಹಾಗೂ ಗೇರು ಕೃಷಿ ಕಾರ್ಯಾಗಾರ ಆಯೋಜಿಸಿದೆ.**

<><><>

**ನಾಳೆ 18 ರಿಂದ 25ರ ವರೆಗೆ, ಎಸ್.ಎಸ್.ಎಲ್.ಸಿ. 2ನೇ ವಾರ್ಷಿಕ ಪರೀಕ್ಷೆ, ರಾಜ್ಯಾದ್ಯಂತ ನಡೆಯಲಿದೆ. ಎಲ್ಲ ಸಿದ್ಧತೆಗಳು ಪೂರ್ಣಗೊಂಡಿವೆ.**

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಒಂದು ರಾಷ್ಟ್ರ; ಒಂದು ಚುನಾವಣೆ’; ಸಂಸದ ಪಿ.ಪಿ. ಚೌಧರಿ ಅಧ್ಯಕ್ಷತೆಯ, ಜಂಟಿ ಸಂಸದೀಯ ಸಮಿತಿ, ಬೆಂಗಳೂರಿಗೆ ಭೇಟಿ.**
- **ವಿಶೇಷಚೇತನ ಮಕ್ಕಳಿಗಾಗಿ, ಉಡುಪಿಯಲ್ಲಿ, ರಾಜ್ಯದಲ್ಲೇ ಪ್ರಥಮ, ಸಾಮರ್ಥ್ಯ ವನ.**
- **ಹತ್ತಕ್ಕಿಂತ ಹೆಚ್ಚು, ಮಹಿಳೆಯರಿರುವ ಕಚೇರಿಗಳಲ್ಲಿ, ‘*ಶಿ ಬಾಕ್ಸ್*’ ಅಳವಡಿಸಲು, ಧಾರವಾಡ ಜಿಲ್ಲಾಡಳಿತದಿಂದ ಕ್ರಮ.**
- **ಹಂಪಿಯಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಉತ್ಖನನ; ಎರಡು ಪ್ರಮುಖ ಐತಿಹಾಸಿಕ ಕುರುಹುಗಳು, ಪತ್ತೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>